ಮಾಯೆ ಎನ್ನ ಕಾಯವನ್ನುಪಯದಿಂದ ನೋಯಿಸಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchha Rayaru, page no. 04.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page no. 209.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 454.
4. **Note:** The lyrics given without highlights are as per Ref. 1. The lyrics given in yellow highlights are as per Ref. 2. The lyrics mentioned in green highlights are as per Ref. 3. The lyrics in these references are slightly different. Hence, all are given separately.
5. **Note:** Singer has mostly followed Ref. 2, but has mixed few wordings from other references. Few wordings used by the singer are different and are given in grey highlights.
6. **Note:** There is one word which is marked in blue stars. I request the researchers to check that.

ರಾಗ ಆನಂದ ಭೈರವಿ ತಾಳ ರೂಪಕ

ಮಾಯೆ ಎನ್ನ ಕಾಯವನ್ನು-ಪಾಯದಿಂದ ಮೋಹಿಸಿ
ಬಾಯ ಮುಚ್ಚಿ ಕೊಲ್ಲುತಿಹಳು ಕಾಯೋ ಲಕ್ಷ್ಮೀ ರಮಣನೆ ‖ ಪ ‖
(ಮಾಯೆ ಎನ್ನ ಕಾಯವನ್ನು-ಪಾಯದಿಂದ ನೋಯಿಸಿ
ಬಾಯಿ ಮುಚ್ಚಿ ಕೊಲ್ಲುತಾಳೆ ಕಾಯೋ ಲಕ್ಷ್ಮೀ ಅರಸನೆ)

ಮಾತೆ-ಪಿತರ ವಿಷಯದಿಂದ ಶ್ವೇತ ಬಿಂದು ಬೀಳಲಾಗಿ
ಕೀತ ತತ್ತಿ ಬಲಿದು ಮಾಸ ಚೀಲದೊಳಗೆ ಬೆಳೆದೆನು
ರಕ್ತಗೂಡಿ ಬಸಿರೊಳೊಂಬತ್ತು ತಿಂಗಳಿದ್ದೆ ನಾನು
ಸತ್ತು ಮತ್ತೆ ಹುಟ್ಟ ಹೋಗಲಾರೆ ಲಕ್ಷ್ಮೀ ರಮಣನೆ ‖ ೧ ‖
(ಮಾತಾಪಿತರ ವಿಕಳದಿಂದ ಶ್ವೇತ ಬಿಂದು ಬೀಳಲು
ರಕ್ತ ಕೀವು ತಾಕಿ ಮಾಂಸ ಚೀಲದೊಳಗೆ ಬೆಳೆದೆ ನಾ

ರಕ್ತ ಸೂಸಿ ಬಸಿರೊಳೊಂಬತ್ತು ತಿಂಗಳಿದ್ದೆ ನಾ
ಮತ್ತೆ ಭೂಮಿಯೊಳಗೆ ಜನಿಸಲಾರೆ ಲಕ್ಷ್ಮೀ ಅರಸನೆ ॥ ೧ ॥)

ಎಲುವು ಕಂಬ ಮಾಡಿ ನರದ ಬಳ್ಳಿಯಲ್ಲಿ ಬಿಗಿದು ಬಿಗಿದು
ಒಳಗೆ ರಕ್ತದಿಂದ ಮೆತ್ತಿ ಹೂಸೆ ಪಾಪದಿಂದ ನಿಂದೆ
ನೆಲೆಯ ಮನೆಯ ಮಾಡಿ ಚರ್ಮ ಹೊಲಿದು ಹೊದಿಕೆ ಹೊದಿಸಿದಂಥ
ಹೊಲೆಯ ಗೂಡಿನಲ್ಲಿ ಜನಿಸಲಾರೆ ಲಕ್ಷ್ಮೀ ರಮಣನೆ ॥ ೨ ॥
(ಎಲುಬು ಗಳವಮಾಡಿ ನರದ ಬಳ್ಳಿಯಲ್ಲಿ ಬಿಗಿಯುತ
ಒಳಗೆ ರಕ್ತ ಮಾಂಸದಿಂದ ಮಲವು ಮಜ್ಜ ಮೇಧದಿ (ಮೇಲತಿ) ****
ಮಲಿನ ಚರ್ಮವನ್ನು ಹೊದಿಕೆಯೆಳೆದು ನಿತ್ಯ ಬೆಳೆವ ಈ
ಹೊಲೆಯ ಗೂಡಿನೊಳಗೆ ಜನಿಸಲಾರೆ ಲಕ್ಷ್ಮೀ ಅರಸನೆ ॥ ೨ ॥)

ಎನ್ನ ಸತಿಯು ಎನ್ನ ಸುತರು ಎನ್ನ ಬಂಧು ಬಳಗವು
ಎನ್ನ ಸಾಕಿ ಸಲಹು ಎಂದು ಹರಿದು ತಿಂಬರು
ಎನ್ನ ತನುವ ಜವನು ಬಂದು ಎಳೆದುಕೊಂಡು ಒಯ್ಯುವಾಗ
ಬೆನ್ನ ಬಪ್ಪರಾರ ಕಾಣೆ ಚೆನ್ನ ಲಕ್ಷ್ಮೀ ರಮಣನೆ ॥ ೩ ॥
(ಎನ್ನ ಸತಿಯು ಎನ್ನ ಸುತರು ಎನ್ನ ಬಂಧು ಬಳಗವು
ಇನ್ನು ಸಾಕಿ ಸಲಹೆಂದು ಎನ್ನ ಹಿರಿದು ತಿಂಬರು
ನನ್ನ ಸೆಳೆದೊಯ್ಯುವಾಗ ಬೆನ್ನಾಪರ ಕಾಣೆನೋ
ಎನ್ನ ಸಲಹಬೇಕು ನೀನು ಚೆನ್ನ ಲಕ್ಷ್ಮೀ ಅರಸನೆ ॥ ೩ ॥)

ಇರುವೆ ಮೊದಲು ಆನೆ ಕಡೆಯು ಬಸಿ-ಬಸಿರೊಳು ಬಂದೆ ನಾ
ಹರಿದು ಪಾಪ ಕರ್ಮದಿಂದ ತೊಳಲಿ ಬಳಲಿ ನೊಂದೆ ನಾ
ಬಿರುಗಾಳಿಗೆ ಸಿಕ್ಕ ಮರದ ತರಗೆಲೆಯಂತುದುರಿ ನಾ
ಮರಳಿ ಮರಳಿ ಸತ್ತು ಹುಟ್ಟಲಾರೆ ಲಕ್ಷ್ಮೀ ರಮಣನೆ ॥ ೪ ॥
(ಇರುವೆ ಮೊದಲುಮಾಡಿ ಆನೆ ಕಡೆಯಮಾಡಿ ಬಸುರಿನಲ್ಲಿ
ಮರಳಿ ಮರಳಿ ಹುಟ್ಟಿ ಹೊಂದಿ ತೊಳಲಿ ಮುಂದೆ ನಾ
ಬಿರುಸು ಗಾಳಿಯೊಳಗೆ ಬಿದ್ದ ತರಗೆಲೆಯ ಅಂದವಾಯ್ತು
ಮರಳಿ ಮರಳಿ ಹುಟ್ಟಿ ಹೊಂದಲಾರೆ ಲಕ್ಷ್ಮೀ ಅರಸನೆ)
ಇರುವೆ ಮೊದಲು ಆನೆ ಕಡೆಯು ಬಸಿರೊಳು ಬಂದೆ ನಾ
ಹರಿದು ಪಾಪ ಕರ್ಮದಿಂದ ತೋಪಳಲಿ ನೊಂದೆನಾ
ಬಿರುಗಾಳಿಗೆ ಸಿಕ್ಕಿ ಮರದ ತರಗೆಲೆಯಂತುದುರಿ ನಾ

ಮರಳಿ ಮರಳಿ ಸತ್ತು ಹುಟ್ಟಲಾರೆ ಲಕ್ಷ್ಮೀಯರಸನೆ

ಲಕ್ಷ ಜೀವ ರಾಶಿಗಳನು ಕುಕ್ಷಿಯೊಳಗೆ ಇರಿಸಿ ನಿನ್ನ
ಅಕ್ಷಯ ಅನಂತ ನನ್ನನ್ನೇಕೆ ಹೊರಗೆ ಮಾಡಿದೆ
ಈಕ್ಷಿಸುತಿರು ಎನ್ನ ನೀನು ಕುಕ್ಷಿಯೊಳಗೆ ಇಂಬನಿತ್ತು
ರಕ್ಷಿಸಯ್ಯ ಲಕ್ಷ್ಮೀಪತಿ ಪುರಂದರ ವಿಠಲನೆ ॥ ೫ ॥
(ಲಕ್ಷ ಜೀವ ರಾಶಿ ನಿನ್ನ ಕುಕ್ಷಿಯೊಳಗಿಂಬಿಟ್ಟು
ಅಚ್ಯುತ ಅನಂತ ನನ್ನನ್ನೇಕೆ ಹೊರಗು ಮಾಡಿದೆ
ಮಚ್ಚರಿಸದೆನ್ನ ನೀನು ಕುಕ್ಷಿಯೊಳಗಿಂಬಿಟ್ಟು
ರಕ್ಷಿಸಯ್ಯ ಲಕುಮಿಯರಸ ಪುರಂದರ ವಿಠ್ಠಲಯ್ಯ)
(ರಕ್ಷಿಸಯ್ಯ ಲಕುಮಿಪತೆ ಪುರಂದರ ವಿಠಲನೆ)

Note: The lyrics given below are as per Ref. 3 above. These are given in green highlights.

ರಾಗ ಧನ್ಯಾಸಿ ತಾಳ ಅಟ

ಮಾಯೆ ಎನ್ನ ಕಾಯವನ್ನು - ಪಾಯದಿಂದ ನೋಯಿಸಿ
ಬಾಯಿ ಮುಚ್ಚಿ ಕೊಲ್ಲುತಾಳೆ ಕಾಯೋ ಲಕ್ಷ್ಮೀಯರಸನೇ ॥ ಪ ॥

ಮಾತಾಪಿತರ ವಿಕಳದಿಂದ ಶ್ವೇತ ಬಿಂದು ಬೀಳಲು
ರಕ್ತ ಕೀವು ತಾಕಿ ಮಾಂಸ ಚೀಲದೊಳಗೆ ಬೆಳೆದೆ ನಾ
ರಕ್ತ ಸೂಸಿ ಬಸಿರೊಳೊಂಬತ್ತು ತಿಂಗಳಿದ್ದೆ ನಾ
ಮತ್ತೆ ಭೂಮಿಯೊಳಗೆ ಜನಿಸಲಾರೆ ಲಕ್ಷ್ಮೀಯರಸನೇ ॥ ೧ ॥

ಎಲುಬು ಗಳವಮಾಡಿ ನರದ ಬಳ್ಳಿಯಲ್ಲಿ ಬಿಗಿಯುತ
ಒಳಗೆ ರಕ್ತ ಮಾಂಸದಿಂದ ಮಲವು ಮಜ್ಜ ಮೇದಾದಿ ****
ಮಲಿನ ಚರ್ಮವನ್ನು ಹೊದಿಕೆಯೆಳೆದು ನಿತ್ಯ ಬೆಳೆವ
ಈ ಹೊಲೆಯ ಗೂಡಿನೊಳಗೆ ಜನಿಸಲಾರೆ ಲಕ್ಷ್ಮೀಯರಸನೇ ॥ ೨ ॥

ಎನ್ನ ಸತಿಯು ಎನ್ನ ಸುತರು ಎನ್ನ ಬಂಧು ಬಳಗವು
ಇನ್ನು ಸಾಕಿ ಸಲಹು ಎಂದು ಎನ್ನ ಹರಿದು ತಿಂಬರು

ನನ್ನ ಸೆಳೆದೊಯ್ಯುವಾಗ ಬೆನ್ನಾಪರ ಕಾಣೆನೋ
ಎನ್ನ ಸಲಹ ಬೇಕು ನೀನು ಚೆನ್ನ ಲಕ್ಷ್ಮೀಯರಸನೇ ॥ ೩ ॥

ಇರುವೆ ಮೊದಲು ಮಾಡಿ ಆನೆ ಕಡೆಯ ಮಾಡಿ ಬಸುರಿನಲ್ಲಿ
ಮರಳಿ ಮರಳಿ ಹುಟ್ಟಿ ಹೊಂದಿ ತೊಳಲಿ ಬಂದೆ ನಾ
ಇರುಸು ಗಾಳಿಯೊಳಗೆ ಬಿದ್ದ ತರಗೆಲೆಯ ಅಂದವಾಯ್ತು
ಮರಳಿ ಮರಳಿ ಹುಟ್ಟು ಹೊಂದಲಾರೆ ಲಕ್ಷ್ಮೀಯರಸನೆ ॥ ೪ ॥

ಲಕ್ಷ ಜೀವ ರಾಶಿ ನಿನ್ನ ಕುಕ್ಷಿಯೊಳಗಿಂಬಿಟ್ಟು
ಅಚ್ಯುತ ಅನಂತ ನನ್ನನ್ನೇಕೆ ಹೊರಗು ಮಾಡಿದೆ
ಮಚ್ಚರಿಸದೆನ್ನ ನೀನು ಕುಕ್ಷಿಯೊಳಗಿಂಬಿಟ್ಟು
ರಕ್ಷಿಸಯ್ಯ ಲಕುಮಿಯರಸ ಪುರಂದರ ವಿಠ್ಠಲಯ್ಯ ॥ ೫ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ಮಾಯೆ = ಅಜ್ಞಾನ

ವಿಷಯ = ಕಾಮೇಚ್ಛೆ

ಶ್ವೇತ ಬಿಂದು = ವೀರ್ಯ

ಕೀತ = ಪಕ್ವವಾದ

ತತ್ತಿ = ಮೊಟ್ಟೆ

ಹುಟ್ಟ ಹೋಗಲಾರೆ = ಜನ್ಮ ತಾಳಲಾರೆ

ಹೂಸೆ = ತೊಡೆಯಲಾಗಿ

ಹೊಳೆಯ ಗೂಡು = ಗರ್ಭಾಶಯ

ಹರಿದು ತಿನ್ನು = ಹೆಚ್ಚಾಗಿ ಕಾಡು

ಜವ = ಯಮ

ಬೆನ್ನ ಬಪ್ಪರು = ಸಂಗಡ ಬರುವವರು

ಬಸಿ-ಬಸಿರೊಳು = ಜನ್ಮ ಜನ್ಮದಲ್ಲಿ

ಹರಿದು = ಓಡಾಡಿ

ತರಗೆಲೆ = ಒಣಗಿದೆಲೆ

ಕುಕ್ಷಿ = ಹೊಟ್ಟೆ

ಇಂಬು = ಉಳಕೊಳ್ಳುವ ಸ್ಥಳ, ಮನೆ, ವಾಸ, ಆಶ್ರಯ

ಮಜ್ಜಾ = ಶುಕ್ರ, ಧಾತು, ವೀರ್ಯ, ಮೂಳೆಯಲ್ಲಿರುವ ಮೆದುವಾದ ಕೊಬ್ಬು

** ಇಲ್ಲಿ ಉಪಯೋಗಿಸಿರುವ ಪದದ ಅರ್ಥವಾಗಿಲ್ಲ. ಒಂದೊಂದು ಕಡೆ ಒಂದೊಂದು ರೀತಿಯಲ್ಲಿದೆ. ಅವುಗಳ ಅರ್ಥ ಕೆಳಗಿನಂತೆ ಇವೆ. ಸಂಶೋಧಕರು ಅದನ್ನು ಸರಿಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೇಲ = ಕೂಡುವಿಕೆ, ಸೇರುವಿಕೆ, ಜೊತೆ,

ಮೇಧ = ಯಾಗ, ಯಜ್ಞ

ಮೇಧಾ = ವಿಷಯ ಧಾರಣ ಶಕ್ತಿಯನ್ನುಳ್ಳ ಬುದ್ಧಿ

(ಇವುಗಳ ಅರ್ಥದ ಪ್ರಕಾರ ಮೇಲತಿ ಸರಿಯಾಗಿದೆ ಎಂದು ಅನಿಸುತ್ತದೆ)

Classification: Keerthane
Ankita: purandara vittala
Location: NA
Category: Samsara Jigupse, Aartha Bhava.
Sub-Category: Vishnu, Lakshmi, arasa, rakta, papa, bhumi, patni, makkalu, deha, jiva, Ananta, udara, achyuta, Akshaya, samsara, bayi, tande, tayi, huttu, marana, bandhu, yama, gaja, karma,
Pravachana: NA
Explanation: NA